ಒ ಎಸ್ 198/2022 ಪಿ.ಡಬ್ಲ್ಯೂ:1

ಇಂದು ದಿ: 24.07.2026 ರಂದು ಸಾಕ್ಷಿಯನ್ನು ಕರೆಯಿಸಲಾಯಿತು. ಪ್ರಮಾಣ ವಚನ ಬೋದಿಸಲಾಯಿತು.

ಪಾಟೀ ಸವಾಲು: ಪ್ರತಿವಾದಿ ಪರ ಶ್ರೀ ಎಂ ಸಿ ಡಿ ಕೆ ವಕೀಲರಿಂದ:

ನನ್ನ ತಾತ ಮತ್ತು ಅಜ್ಜಿಗೆ ನನ್ನ ತಂದೆ ಒಳಗೊಂಡಂತೆ 3 ಜನ ಮಕ್ಕಳು ಎಂದರೆ ಸರಿ. ನನ್ನ ತಾತ ಬೋಳನಾಯಕ ಮೃತಪಟ್ಟು ಎಷ್ಟು ವರ್ಷ ಆಗಿದೆ ಎಂದು ಗೊತ್ತಿಲ್ಲ. ಅವರು ನಾನು ಹುಟ್ಟುವ ಮೊದಲೇ ಮೃತಪಟ್ಟರೋ ಎಂದು ಗೊತ್ತಿಲ್ಲ. ನನ್ನ ಅಜ್ಜಿ ನಂಜಮ್ಮನನ್ನು ನೋಡಿರುತ್ತೇನೆ. ದಾವಾ 1ನೇ ಐಟಂ ಆಸ್ತಿ, ಇನ್ನೊಂದು 1 ಎಕರೆ 17 ಗುಂಟೆ ಜಮೀನು, ನಂತರ 2 ಮತ್ತು 3ನೇ ದಾವಾ ಆಸ್ತಿ ಮತ್ತು ಕೆಂಬಾಲೆ ಗ್ರಾಮದಲ್ಲಿ 3 ಖಾಲಿ ನಿವೇಶನಗಳು ನನ್ನ ತಾತ ಬೋಳನಾಯಕನಿಗೆ ಸೇರಿದ ಆಸ್ತಿಗಳು ಎಂದರೆ ಸರಿ. ನನಗೆ ಬುದ್ದಿ ಬರುವ ಪೂರ್ವದಲ್ಲಿ 2, 6ನೇ ಪ್ರತಿವಾದಿ ಮತ್ತು ಮರಿಚೌಡನಾಯಕ ಬಾಯಿ ಮಾತಿನ ಮೂಲಕ ಈ ಎಲ್ಲಾ ಆಸ್ತಿಗಳನ್ನು ವಿಭಾಗ ಮಾಡಿಕೊಂಡಿದ್ದರು ಎಂದರೆ ಸರಿ. ಬಾಯಿ ಮಾತಿನ ವಿಭಾಗವಾಗಿ ಇವತ್ತಿಗೆ ಅನ್ವಯಿಸುವಂತೆ 30 ವರ್ಷದ ಹಿಂದೆ ಆಗಿದೆ ಎಂದರೆ ನನಗೆ ಗೊತ್ತಿಲ್ಲ.

2 ಮತ್ತು 6ನೇ ಪ್ರತಿವಾದಿಗಳು ಎಷ್ಟು ವರ್ಷದ ಹಿಂದೆ ಭಾಗ ಮಾಡಿಕೊಂಡರು ಎಂದು ನನಗೆ ಗೊತ್ತಿಲ್ಲ. ನನ್ನ ತಂದೆ ಮತ್ತು ನನ್ನ ಚಿಕ್ಕಪ್ಪ ಆಸ್ತಿ ಭಾಗ ಮಾಡಿಕೊಂಡಿದ್ದರು ಎಂದು ಪ್ರಕರಣ ದಾಖಲು ಮಾಡುವಾಗ ನನ್ನ ವಕೀಲರಿಗೆ ಹೇಳಿಲ್ಲ. ನನ್ನ ವಾದ ಪತ್ರದಲ್ಲಿ ನನ್ನ ತಂದೆ ಮತ್ತು ನನ್ನ ಚಿಕ್ಕಪ್ಪನ ನಡುವೆ ಭಾಗ ಆಗಿದೆ ಎಂದು ನಮೂದು ಆಗಿದ್ದರೆ ಅದು ತಪ್ಪು. ಮರಿಚೌಡನಾಯಕರವರು ಸರ್ವೆ ನಂ. 271/5 ರಲ್ಲಿ 1 ಎಕರೆ 17 ಗುಂಟೆ ಜಮೀನನ್ನು ವಿಭಾಗ ಆಧಾರದಲ್ಲಿ ಖಾತೆ ಮಾಡಿಸಿಕೊಂಡು ಸ್ವಾಧೀನದಲ್ಲಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಈಗ ಹೇಳಿದ ಜಮೀನು ನನ್ನ ತಾತ ಬೋಳನಾಯಕನ ಜಮೀನು ಎಂದು ನನಗೆ ಗೊತ್ತಿಲ್ಲ. ಮರಿಚೌಡನಾಯಕ ನನ್ನ ಚಿಕ್ಕಪ್ಪ. ನನ್ನ ಚಿಕ್ಕಪ್ಪ ಕೆಂಬಾಲೆ ಗ್ರಾಮದಲ್ಲಿ ಮನೆ ಕಟ್ಟಿಕೊಂಡು ವಾಸ ಇದ್ದಾರೆ ಎಂದರೆ ಸರಿ. ಕೆಂಬಾಲೆ ಗ್ರಾಮದಲ್ಲಿ ನನ್ನ ಚಿಕ್ಕಪ್ಪನಿಗೆ 30 x 40ರ ನಿವೇಶನ ಇರುವ ಬಗ್ಗೆ ಗೊತ್ತಿಲ್ಲ. ಈ ದಾವೆಯ ಅಷ್ಟು ಸ್ವತ್ತುಗಳಲ್ಲಿ ನನ್ನ ತಂದಗೆ ಬಂದಿತ್ತು ಎಂದು ಹೇಳಲಾದ ಆಸ್ತಿಯಲ್ಲಿ ಚಿಕ್ಕಹನುಮನಾಯಕನಿಗೆ ಯಾವೆಲ್ಲಾ ಆಸ್ತಿ ಹೋಯಿತು ಎಂದು ನನಗೆ ಗೊತ್ತಿಲ್ಲ.

ನನ್ನ ತಾತ ಬೋಳನಾಯಕನಿಗೆ ಎಷ್ಟು ಆಸ್ತಿ ಇತ್ತು ನಿಖರವಾಗಿ ಬರೆಸಲು ತೊಂದರೆ ಇತ್ತೆ ಎಂದರೆ ಗೊತ್ತಿಲ್ಲ ಎನ್ನುತ್ತಾರೆ. ದಾವಾ 1ನೇ ಐಟಂ ಆಸ್ತಿಯಲ್ಲಿ 2 ಎಕರೆ 14 ಗುಂಟೆ ಪೈಕಿ ನನ್ನ ತಂದೆಗೆ 1 ಎಕರೆ, 6ನೇ ಪ್ರತಿವಾದಿಗೆ 1 ಎಕರೆ 14 ಗುಂಟೆ ಬಂತು ಎಂದರೆ ಗೊತ್ತಿಲ್ಲ. ದಾವೆಯಲ್ಲಿ ತೋರಿಸಿದ 2 ಮತ್ತು 3ನೇ ಆಸ್ತಿಯ ಮನೆಗಳಲ್ಲಿ ನಮಗೆ ಅರ್ಧ ಮತ್ತು ಅವರಿಗೆ ಅರ್ಧ ಭಾಗ ಬಂದಿರುತ್ತದೆ ಎಂದರೆ ಸರಿಯಲ್ಲ. ಪೂರ್ವಕ್ಕೆ ರಸ್ತೆ, ಪಶ್ಚಿಮಕ್ಕೆ ಮರಿನಾಯಕನ ಸ್ವತ್ತು, ಉತ್ತರಕ್ಕೆ ರಸ್ತೆ ದಕ್ಷಿಣಕ್ಕೆ ಚಿಕ್ಕಹನುಮನಾಯಕನ ಆಸ್ತಿ ಎಂದರೆ ಸರಿ.

ಈ ಚೆಕ್ಕುಬಂದಿಯಲ್ಲಿ ನನ್ನ ತಂದೆ ವಾಸ ಇದ್ದಾರೆ. ದಕ್ಷಿಣಕ್ಕೆ ಇರುವ ಚಿಕ್ಕಹನುಮನಾಯಕ ಎಂದರೆ ನನ್ನ ಚಿಕ್ಕಪ್ಪ. ಅವರಿಗೆ ಅಲ್ಲಿ ವಾಸದ ಮನೆ ಇದೆ, ಅದು ಬೋಳನಾಯಕನ ಸ್ವತ್ತು ಎಂದರೆ ಗೊತ್ತಿಲ್ಲ. ಆ ಮನೆಯಲ್ಲಿ ನನಗೆ ಬುದ್ಧಿಬಂದಾಗಿನಿಂದ 6ನೇ ಪ್ರತಿವಾದಿ ಅವರ ಪತ್ನಿ ಮತ್ತು ಮಕ್ಕಳ ಜೊತೆ ವಾಸ ಇದ್ದಾರೆ ಎಂದರೆ ಸರಿ. ಪೂರ್ವಕ್ಕೆ ಜವರನಾಯಕನ ಸ್ವತ್ತು, ಪಶ್ಚಿಮಕ್ಕೆ ರಾಮನಾಯಕ ಸ್ವತ್ತು, ಉತ್ತರಕ್ಕೆ ಬಾಲನಾಯಕ ದಕ್ಷಿಣಕ್ಕೆ ಸಿದ್ದನಾಯಕ ಆಸ್ತಿ ಆ ಚೆಕ್ಕಬಂಧಿಯಲ್ಲಿ ನನ್ನ ತಮ್ಮ ಕೆಂಪನಾಯಕ ವಾಸ ಇದ್ದಾನೆ. 1ನೇ ಮನೆಯನ್ನು 3 ಜನ ಭಾಗ ಮಾಡಿಕೊಂಡಿದ್ದಾರೆ ಅವರೆಂದರೆ ನನ್ನ ತಂದೆ ನಾಗನಾಯಕ, ನನ್ನ ಅಣ್ಣ ಶಂಕರನಾಯಕನ ಕುಟುಂಬ, 5ನೇ ಪ್ರತಿವಾದಿ ವಾಸ ಇದ್ದಾರೆ ಎಂದರೆ ಸರಿ. ಆ ರೀತಿ ಮನೆಯನ್ನು ಭಾಗ ಮಾಡಿಕೊಂಡು ವಾಸ ಮಾಡಲು ಪ್ರಾರಂಭ ಮಾಡಿ 5 ವರ್ಷ ಆಗಿದೆ.

ಪ್ರತಿವಾದಿ 2 ರಿಂದ 5ರವರು ದಾವೆಗೆ ಬರುತ್ತಿಲ್ಲ. 8ನೇ ಪ್ರತಿವಾದಿಯಾದ ಮಹದೇವಸ್ವಾಮಿ ಈ ದಾವೆಯಲ್ಲಿ ಬಂದ ಭಾಗದ ಆಸ್ತಿಯನ್ನು ಬಿಡಿಸಿಕೊಡಬೇಕೆಂದು 2ನೇ ಹೆಚ್ಚುವರಿ ನ್ಯಾಯಾಲಯ ನಂಜನಗೂಡಿನಲ್ಲಿ ಓ ಎಸ್ 474/2024 ಅನ್ನು ನನ್ನ ವಿರುದ್ದ ಸಲ್ಲಿಸಿದ್ದಾರೆ ಎಂದರೆ ನನಗೆ ಆ ವಿಚಾರ ಗೊತ್ತಿಲ್ಲ. ದಾವಾ ಆಸ್ತಿಯ ಖಾತೆ ಮೊದಲು ನನ್ನ ಅಜ್ಜಿ ಹೆಸರಿನಲ್ಲಿತ್ತು ಎಂದರೆ ನನಗೆ ಗೊತ್ತಿಲ್ಲ. ಸ್ವತ್ತಿನ ಖಾತೆಯನ್ನು ಕುಟುಂಬದ ಹಿರಿಯ ಮಗ ಎಂ ಆರ್ 30/2021-22ರಂತೆ ನನ್ನ ತಂದೆ ಹೆಸರಿಗೆ ಖಾತೆ ಆಗಿತ್ತು ಎಂದರೆ ಗೊತ್ತಿಲ್ಲ. ಈ ದಾವೆಯ 1ನೇ ಐಟಂ ಆಸ್ತಿಯ 2019ನೇ ಇಸವಿಯ ಆರ್ ಟಿ ಸಿ ಯನ್ನು ಕೊಡಬಹುದೇ ಎಂದರೆ ನನಗೆ ಗೊತ್ತಿಲ್ಲ. ಆ ಆರ್ ಟಿ ಸಿ ಕೊಟ್ಟರೆ ವಾಸ್ತವಾಂಶ ತಿಳಿಯಬಹುದು ಎಂದು ಗೊತ್ತಿಲ್ಲ ಎಂದು ಹೇಳುತ್ತಿದ್ದೇನೆ ಎಂದರೆ ಅದೂ ಗೊತ್ತಿಲ್ಲ ಎನ್ನುತ್ತಾರೆ. ವಿಭಾಗವಾದಾಗಿನಿಂದ ದಾವಾ 1ನೇ ಐಟಂ ಆಸ್ತಿಯನ್ನು 1 ಎಕರೆ ಆಸ್ತಿಯನ್ನು ನಮ್ಮ ತಂದೆ ನಾಗನಾಯಕ, 2 ರಿಂದ 5ನೇ ಪ್ರತಿವಾದಿಗಳು ಮತ್ತು ನಾನು ಸ್ವಾಧೀನದಲ್ಲಿ ಇದ್ದೇವೆ ಎಂದರೆ ಸರಿ.

ವಿಭಾಗವಾದಾಗಿನಿಂದ ನನ್ನ ಚಿಕ್ಕಪ್ಪ ದಿನಾಂಕ 09.03.2022ರವರೆಗೆ ಮಾಡಿಕೊಂಡಿದ್ದರು ಎಂದರೆ ನನಗೆ ಗೊತ್ತಿಲ್ಲ. ವಿಭಾಗವಾಗಿ ಸ್ವಾಧೀನದಲ್ಲಿ ಇದ್ದರೂ ಸಹ ಗೊತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 26 ಗುಂಟೆ ಜಮೀನನ್ನು ದಿನಾಂಕ 09.03.2022 ರ ನೊಂದಾಯಿತ ಕ್ರಯ ಪತ್ರದ ಮೂಲಕ ಈ ದಾವೆಯ 1ನೇ ಪ್ರತಿವಾದಿಗೆ ಮಾರಾಟ ಮಾಡಿದರು ಎಂದರೆ ಸರಿ. ದಿನಾಂಕ 09.03.2022 ರಿಂದ ಉಳಿಕೆ 28 ಗುಂಟೆ ಜಮೀನು ನನ್ನ ಚಿಕ್ಕಪ್ಪ ಮತ್ತು ಮಕ್ಕಳ ಮಾಲೀಕತ್ವ ಮತ್ತು ಸ್ವಾಧೀನದಲ್ಲಿ ಇದೆ ಎಂದರೆ ಗೊತ್ತಿಲ್ಲ. ಕ್ರಯ ಪತ್ರದ ಸಂಪೂರ್ಣ ಹಣ ನನ್ನ ಚಿಕ್ಕಪ್ಪ, ಚಿಕ್ಕಮ್ಮ ಮತ್ತು ಮಹದೇವಸ್ವಾಮಿಗೆ ಸೇರಿತ್ತು ಎಂದರೆ ನನಗೆ ಗೊತ್ತಿಲ್ಲ. ನನ್ನ ತಂದೆಯ ಹೆಸರಿನಲ್ಲಿ ಆ ಸ್ವತ್ತಿನ ಖಾತೆ ಇದ್ದ ಕಾರಣಕ್ಕಾಗಿ 2 ರಿಂದ 5ನೇ ಪ್ರತಿವಾದಿಗಳು ಕ್ರಯ ಪತ್ರಕ್ಕೆ ಸಹಿ ಮಾಡಿದ್ದಾರೆ ಹೊರತಾಗಿ ಅವರಿಗೆ ಆ ಸ್ವತ್ತಿನ ಮೇಲೆ ಮಾಲೀಕತ್ವ ಮತ್ತು ಸ್ವಾಧೀನ ಇರಲಿಲ್ಲ ಎಂದರೆ ನನಗೆ ಗೊತ್ತಿಲ್ಲ. ಆ ಕ್ರಯ ಪತ್ರದ ನಯಾಪೈಸೆಯೂ ಸಹ 2 ರಿಂದ 5ನೇ ಪ್ರತಿವಾದಿಗೆ ಬಂದಿರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ.

ದಿನಾಂಕ 09.03.2022 ರಿಂದ 1ನೇ ಪ್ರತಿವಾದಿ ಖರೀದಿಸಿದ ಜಮೀನಿನಲ್ಲಿ ಅವರು ಉಳುಮೆ ಮಾಡಿ ಸ್ವಾಧೀನದಲ್ಲಿ ಇದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಕ್ರಯದ ನಂತರ ಎಂ ಆರ್ 1ನೇ ಪ್ರತಿವಾದಿ ಹೆಸರಿಗೆ ಬದಲಾವಣೆಯಾಗಿರುವುದು ನನಗೆ ಗೊತ್ತಿಲ್ಲ. 6 ರಿಂದ 8ನೇ ಪ್ರತಿವಾದಿಗಳಿಗೆ ಬಂದ ಆಸ್ತಿ ಖಾತೆಯನ್ನು ಬದಲಾವಣೆ ಮಾಡಿಕೊಡಿ ಎಂದು ಅವರು ನನ್ನ ತಂದೆಯ ಬಳಿ ಕೇಳಿದ್ದರು ಎಂದರೆ ನನಗೆ ಗೊತ್ತಿಲ್ಲ. ಖಾತೆ ಬದಲಾವಣೆಗೆ ಕೇಳಿಕೊಂಡಾಗ ಕೊಟ್ಟಿಲ್ಲ ಎಂಬ ಕಾರಣಕ್ಕಾಗಿ 2 ರಿಂದ 5ನೇ ಪ್ರತಿವಾದಿಯು ನನ್ನನ್ನು ಎತ್ತಿಕಟ್ಟಿ ಈ ದಾವೆ ಸಲ್ಲಿಸಲಾಗಿದೆ ಎಂದರೆ ಸರಿಯಲ್ಲ. ಖಾತೆ ಮಾಡಿಕೊಡುವಂತೆ ಕೇಳಿಕೊಂಡರೂ ಸಹ ಖಾತೆ ಮಾಡಿಕೊಡದ ಕಾರಣ ಒ ಎಸ್ 474/2024 ಅನ್ನು ನನ್ನ ವಿರುದ್ಧ ಸಲ್ಲಿಸಿದ್ದಾರೆ ಎಂದರೆ ಸರಿಯಲ್ಲ. ನನ್ನ ತಂದೆ ಮತ್ತು ಚಿಕ್ಕಪ್ಪನಿಗೆ ಬಂದ ಆಸ್ತಿಯನ್ನು ಅವರವರೇ ಅನುಭವಿಸಿಕೊಂಡು ಬರುತ್ತಿದ್ದಾರೆ ಎಂದರೆ ನನಗೆ ಗೊತ್ತಿಲ್ಲ.

ದಾವಾ ಸ್ವತ್ತುಗಳು ಒಟ್ಟು ಕುಟುಂಬದ ಅಸ್ತಿತ್ವದಲ್ಲಿ ಇಲ್ಲ ಎಂದರೆ ಸರಿಯಲ್ಲ. ಮಾರಾಟವಾದ ನಂತರ ಭಾಗ ಕೊಡಿ ಎಂದು ನಾನು ಕೇಳಿದ್ದೆ ಎನ್ನುವುದು ಸುಳ್ಳು ಎಂದರೆ ಸರಿಯಲ್ಲ, ನಾನು ಭಾಗ ಕೇಳಿದ್ದೆ ಎನ್ನುತ್ತಾರೆ. ದಾವಾ ಆಸ್ತಿಯಲ್ಲಿ ಭಾಗ ಇಲ್ಲ ಎಂದು ತಂದೆ ಹೇಳಿದ್ದರು ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ 1 ಎಕರೆ ಆಸ್ತಿ ನನ್ನ ತಂದೆ, 2 ರಿಂದ 5ನೇ ಪ್ರತಿವಾದಿಗೆ ಬಂದಿರುವ ಕಾರಣ ಉಳಿಕೆ 1 ಎಕರೆ 14 ಗುಂಟೆ ಜಮೀನಿನಲ್ಲಿ ನಮಗೇನು ಹಕ್ಕು ಉಳಿದಿಲ್ಲ ಎಂದರೆ ಸರಿಯಲ್ಲ. ಆ ಕಾರಣ ದಾವಾ ಆಸ್ತಿಯ 1 ಎಕರೆ 14 ಗುಂಟೆ ಜಮೀನಿನಲ್ಲಿ ಭಾಗ ಕೇಳುವ ಪ್ರಶ್ನೆ ಹಾಗೂ ಭಾಗ ಇದೆ ಎನ್ನುವ ಪ್ರಶ್ನೆ ಉದ್ಭವಿಸುವುದಿಲ್ಲ ಎಂದರೆ ಸರಿಯಲ್ಲ. ಹೇಗಾದರೂ ಮಾಡಿ ನನ್ನ ಚಿಕ್ಕಪ್ಪನಿಗೆ ಬಂದಿರುವ ಸ್ವತ್ತುಗಳನ್ನು ಕೊಡಬಾರದು ಎಂದು ಸುಳ್ಳು ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಮಾರಾಟ ಮಾಡಿರುವ ಆಸ್ತಿ ನನ್ನ ಚಿಕ್ಕಪ್ಪನಿಗೆ ಸೇರಿರುವುದರಿಂದ ಕ್ರಯ ಪತ್ರ ಬದ್ಧಪಡಿಸುವುದು ಮತ್ತು ಬದ್ಧಪಡಿಸದಿರುವುದು ಎರಡೂ ಪ್ರಶ್ನೆ ಉದ್ಭವಿಸುವುದಿಲ್ಲ ಎಂದರೆ ಸರಿಯಲ್ಲ. ತೊಂದರೆ ಕೊಡುವ ಸಲುವಾಗಿ ವಿನಾ ಕಾರಣ ಸುಳ್ಳು ಹೇಳಿ ಅರ್ಜಿ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.

ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ.ಇದೆ.
ಸಹಿ/-
ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ, ನಂಜನಗೂಡು.